ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2119/2018

ಚಾಸಾ: 24 ಪ್ರಾಸಾ:13

ದಿನಾಂಕ: 26.09.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ನಿಖಿಲ್ ಕುಮಾರ್ |
| ತಂದೆಯ ಹೆಸರು | : | ಭಾಸ್ಕರ್ ಶೆಟ್ಟಿ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ ಸ್ಥಳ | : | ತೆಕ್ಕಟ್ಟೆ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ಕೆಎ-20-ಎನ್-2213 ಕಾರಿನ ಮಾಲೀಕನಾಗಿರುತ್ತೇನೆ. ನಾನು ಸದ್ರಿ ಕಾರನ್ನು ನನ್ನ ಸ್ನೇಹಿತನಾದ ಕಿರಣ್ ಶೆಟ್ಟಿ ರವರಿಗೆ ನೀಡಿದ್ದು, ಅವರೊಂದಿಗೆ ದೀಕ್ಷಿತ್ ಶೆಟ್ಟಿ, ಜೀವನ್ ಶೆಟ್ಟಿ- ಚಾಸಾ-1, ಅರುಣ್ ಶೆಟ್ಟಿ -ಚಾಸಾ-3, ಮನೀಶ್ ಶೆಟ್ಟಿ ಚಾಸಾ-2 ರವರು ಇದ್ದರು. 2018 ಜುಲೈ ನಲ್ಲಿ ಸದ್ರಿ ಕಾರಿಗೆ ದುರ್ಗಾಂಬಾ ಬಸ್ಸು ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ. ಇದರಿಂದ ನನ್ನ ಸ್ನೇಹಿತರಾದ ಕಿರಣ್ ಮತ್ತು ದೀಕ್ಷಿತ್ ಮೃತಪಟ್ಟಿರುತ್ತಾರೆ. ಚಾಸಾ-1 ರಿಂದ 3 ರವರು ತೀವ್ರವಾಗಿ ಗಾಯಗೊಂಡಿರುತ್ತಾರೆ. ನನ್ನ ಕಾರು ಸಂಪೂರ್ಣವಾಗಿ ಜಖಂಗೊಂಡಿರುತ್ತದೆ. ನಾನು ಸದ್ರಿ ಕಾರನ್ನು ದಿ: 04-09-2018 ರಂದು ಸೂಕ್ತ ಬಾಂಡನ್ನು ನೀಡಿ ಬಿಡುಗಡೆಗೆ ಪಡೆದಿರುತ್ತೇನೆ.

ಸಾಕ್ಷಿ ನಿಪಿ-2 ಮತ್ತು 3 ರಲ್ಲಿ ಕಾರಿನ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಇಂಡಿಮಿನಿಟಿ ಬಾಂಡನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-19 ಎಂದು, ಸಾಕ್ಷಿ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಕೆ ಆರ್ ಎನ್ ರವರಿಂದ:**

ನಾನು ಅಪಘಾತದ ಪ್ರತ್ಯಕ್ಷದರ್ಶಿ ಅಲ್ಲ. ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**